

## ಬೇಸ್ತು?

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿರುವ ಕದರಿ ಲಕ್ಷ್ಮೀನರಸಿಂಹ ಸ್ವಾಮಿ ನಮ್ಮ ಮನೆ ದೇವರು. ಕಳೆದ ತಿಂಗಳು ನಮ್ಮ ಕುಟುಂಬದವರೆಲ್ಲರೂ ತುಮಕೂರಿನಿಂದ ಕಾರಿನಲ್ಲಿ ಸ್ವಾಮಿಯ ದರ್ಶನಕ್ಕೆ ಹೋಗಿದ್ದೆವು. ಸ್ವಾಮಿಯ ದರ್ಶನ ಮಾಡಿದ ಮೇಲೆ ಪ್ರಸಾದ ಸ್ವೀಕರಿಸಿ, ಕದರಿ ಪಟ್ಟಣದ ಪೇಟೆ ಬೀದಿಯಲ್ಲಿ ನಡೆದು ಬರುತ್ತಿದ್ದಾಗ ದಾರಿಯಲ್ಲಿ ನಾಲ್ಕಾರು ಕಡೆ ಹಲಸಿನ ಹಣ್ಣಿನ ರಾಶಿಗಳನ್ನು ಕಂಡೆವು. ನನ್ನ ಮಗ ಆಂಧ್ರ ಪ್ರದೇಶದ ಹಲಸಿನ ಹಣ್ಣುಗಳ ರುಚಿ ನೋಡಬಯಸಿ, ಒಬ್ಬನ ಬಳಿ ಚೌಕಾಸಿ ಮಾಡಿ 80 ರೂ. ಗಳಿಗೆ ಒಂದು ಹಣ್ಣನ್ನು ಕೊಂಡನು. ನಂತರ ನನ್ನ ಮಗ ವ್ಯಾಪಾರಿಯನ್ನು ಕುರಿತು 'ಈ ಹಣ್ಣುಗಳನ್ನು ಇಲ್ಲೇ ಬೆಳೆದಿದ್ದಾ?' ಎಂದು ಕೇಳಿದ. ಅದಕ್ಕೆ ವ್ಯಾಪಾರಿ, 'ಅಲ್ಲಾ ಸ್ವಾಮಿ, ಕೊಂಡದ್ದು' ಎಂದ. 'ಎಲ್ಲಿ ಕೊಂಡದ್ದು' ಎಂದು ನನ್ನ ಮಗ ಕೇಳಿದಾಗ ವ್ಯಾಪಾರಿ, 'ತುಮಕೂರು ಕಡೆಯಿಂದ ಕೊಂಡದ್ದು' ಎಂದಾಗ ನಾವೆಲ್ಲರೂ ಜೋರಾಗಿ ನಕ್ಕೆವು. ತುಮಕೂರಿನವರಾದ ನಾವು ದೂರದ ಕದರಿಗೆ ಹೋಗಿ ನಮ್ಮೂರಿನ ಹಣ್ಣನ್ನೇ ಹೆಚ್ಚು ಬೆಲೆ ತೆತ್ತು ಕೊಂಡಿದ್ದೆವು.

**ಜಿ. ಅನಂತನಾರಾಯಣ ಸ್ವಾಮಿ, ತುಮಕೂರು**

## ಒಂಜಿ, ಟೂಜಿ, ತ್ರೀಜಿ...

ಎಲ್.ಕೆ.ಜಿ.ಯಲ್ಲಿರುವ ನನ್ನ ತಮ್ಮನ ಮಗಳು ಶುಭದಾಳಿಗೆ ತುಳು ಭಾಷೆಯನ್ನು ಕಲಿಸೋಣವೆಂದು ಪ್ರಯತ್ನಿಸಿದೆ. 1, 2, 3, 4 ಹೇಳಿಕೊಡೋಣ ಎಂದು ಒಂದೊಂದೇ ಬೆರಳನ್ನು ತೋರಿಸುತ್ತಾ, 'ಒಂಜಿ, ಎರಡ್, ಮೂಜಿ, ನಾಲ್, ಐನ್, ಆಜಿ'... ಎಂದು ತುಳು ಭಾಷೆಯ ಅಂಕಿಗಳನ್ನು ಹೇಳಿಕೊಟ್ಟೆ. ನಂತರ ಬೆರಳನ್ನು ತೋರಿಸುತ್ತಾ, ಪುನರಾವರ್ತಿಸುವಂತೆ ಹೇಳಿದೆ.

ಆಕೆ ಹೇಳಿದಳು: 'ಒಂಜಿ, ಟೂಜಿ, ತ್ರೀಜಿ, ಫೋರ್‌ಜಿ, ಫೈವ್‌ಜಿ!...'

**ಪಿ.ಜಿ. ರಾಘವೇಂದ್ರ, ಮೈಸೂರು**

